(ಇಂದು ದಿನಾಂಕ 06.03.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಂದುವರೆದ ಪಾಟೀ ಸವಾಲು:- ವಾದಿ ಪರ ವಕೀಲರಿಂದ:-**

ನಾನು 1947 ರಲ್ಲಿ ಜನಿಸಿರುತ್ತೇನೆ. ನಮ್ಮ ಗ್ರಾಮ ಹಂಫಲಘಟ್ಟ ಗ್ರಾಮದಿಂದ 32 ಕಿಲೋ ಮೀಟರ್ ದೂರ ಇದೆ. ನಾನು ಹುಟ್ಟಿದಾಗಿನಿಂದಲೂ ನಮ್ಮ ಗ್ರಾಮದಲ್ಲಿ ವಾಸವಾಗಿದ್ದೇನೆ. ಹಂಫಲಘಟ್ಟ ಗ್ರಾಮದಲ್ಲಿ ಜಮೀನು ಇಲ್ಲ, ಸಂಬಂಧಿಕರು ಇದ್ದಾರೆ. ಪ್ರತಿವಾದಿಗಳು ನಮ್ಮ ಸಂಬಂಧಿಕರಲ್ಲ. ನಾನು ಮುಜುರಾಯಿ ದೇವಸ್ಥಾನದಲ್ಲಿ ಅರ್ಚಕತನ ಮಾಡುತ್ತಿದ್ದೇನೆ. ನನ್ನನ್ನು ಅರ್ಚಕನನ್ನಾಗಿ ನೇಮಿಸಿದ ಬಗ್ಗೆ ದಾಖಲೆ ಇದೆ, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾನು 4 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಧಾರ್ಮಿಕ ವಿದ್ಯೆಯನ್ನು ಪ್ರತ್ಯೇಕವಾಗಿ ಓದಿರುವುದಿಲ್ಲ, ಪೂಜೆಗೆ ಅವಶ್ಯಕತೆ ಇರುವ ಮಂತ್ರಗಳನ್ನು ಕಲಿತಿರುತ್ತೇನೆ. ಬಾಲಗುರಪ್ಪ ಯಾವ ವರ್ಷದಲ್ಲಿ ಜಮೀನು ಖರೀದಿಸಿದರು ಎಂದು ನನಗೆ ಗೊತ್ತಿಲ್ಲ, ಮಾರಾಟಗಾರರು ಮಾರಿದ ಬಗ್ಗೆ ನನಗೆ ಹೇಳಿದ್ದಾರೆ. ಮಾರಾಟಗಾರರ ಹೆಸರು ಶಾನಭೋಗ ರಾಮಣ್ಣ ಅವರ ಮಗ ಸೀತಾಂಬರಯ್ಯ. ನನಗೆ ಪಟೇಲ್ ಅಣ್ಣಯ್ಯ ಗೊತ್ತಿಲ್ಲ. ಎಮ್ ಗುರಪ್ಪನವರ ಹೆಸರಿಗೆ ಮಾಲೀಕತ್ವ ವರ್ಗಾಯಿಸುವ ದಾಖಲೆಗಳನ್ನು ನೋಡಿದ್ದೀರಾ ಎಂದರೆ ಸಾಕ್ಷಿ ಅವರು ಒಟ್ಟು ಕುಟುಂಬದಲ್ಲಿ ಇದ್ದಾರೆ ಎನ್ನುತ್ತಾರೆ. ಬಾಲಗುರಪ್ಪನವರ ಹೆಸರಿಗೆ ಇದ್ದ ದಾಖಲೆಯನ್ನು ನಾನು ನೋಡಿಲ್ಲ. ಪಟೇಲ್ ಅಣ್ಣಯ್ಯನವರ ಮನೆಯಲ್ಲಿ ಬಾಲಗುರಯ್ಯ ವಾಸ ಮಾಡಿದ್ದನ್ನು ನೋಡಿಲ್ಲ, ಹೇಳಿದ್ದನ್ನು ಕೇಳಿದ್ದೇನೆ. ಆ ವಿಷಯವನ್ನು ನನಗೆ ಶಾನುಭೋಗ ರಾಮಣ್ಣ ಕುಟುಂಬದವರು ಹೇಳಿದರು. ಬಾಲಗುರಪ್ಪನವರಿಗೆ ಕ್ರಯಪತ್ರ ಆದಾಗ ನಾನು ಹುಟ್ಟಿರಲಿಲ್ಲ. ನಾನು ಬೇರೆಯವರು ಹೇಳಿದ ಮೇರೆಗೆ ಆ ವಿಷಯವನ್ನು ತಿಳಿದುಕೊಂಡಿದ್ದೇನೆ.

**ಮರುವಿಚಾರಣೆಃ- ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓದಿ ಹೇಳಿ ಕೇಳಿ ಸರಿ ಇದೆ.

2 ನೇ ಅಪರ ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ,
ಆನೇಕಲ್.